# ನೀಲಿ ಚಿತ್ರದ ಹುಡುಗಿ

ತೆರೆ,
ತೆರೆದು
ನಡುಗುತ್ತಾ ಕಣ್ಣರಲಿಸಿ
ತೊಡೆಗಳನಗಲಿಸಿ–
ಇನಿಯನಂಬಲಿಕೆಗೆ
ತನುವರಳಿಸಿ,
ಸಿದ್ಧಗೊಂಡಿದ್ದಾಳೆ
ಸಂಭೋಗಕೆ–

ನೀಲಿಚಿತ್ರದ ಹುಡುಗಿ

ಕಿಟಕಿಯಾಚೆ
ಗೂಬೆ ಕೂಗು
ಬೆಚ್ಚಿದಳು ನೀರೆ
ಬಯಲ ಗಾಳಿ
ಮೈ ಸೋಕಿದಾ ಕ್ಷಣದಲಿ
ಸರಿಸಿದವಳ ಸೀರೆ

ಬೀದಿ ಜನರ ಕಣ್ಣು
ಸಂಚರಿಸಿ ಒಂದೊಂದೇ
ಭಾಗ–ಸಂಸ್ಕರಿಸಿ
ಬೆಳ್ಳಿತೆರೆ, ತೆರೆದು
ಖಂಡ, ಖಂಡಗಳ

ಉಬ್ಬು, ತಗ್ಗುಗಳ ನೇವರಿಸಿ
ತಡವಿ, ಕೆಡವಿ
ಸಾಂಗವಾಗಿ ನಡೆಯುತ್ತಿದೆ
ಅತ್ಯಾಚಾರ

ಸಿದ್ಧಗೊಂಡಿದೆ
ತಿಳಿ ತಿಳಿದು
ಬೀದಿಯಲ್ಲಿ ಬೆತ್ತಲಾದ
ದೇಹ ಕೈಲಿಡಿದು
ಹೇಡಿ ಮನ ಬಿಡಿಸಿ
ಒಂದೊಂದೇ ಹೂವಿನೆಸಳು

ಜಾತ್ರೆಯಲ್ಲಿ ನಿಂತ
ಜನರ ಕಾಲ ಕೆಳಗೆ
ಬದುಕು ಬಯಲಾಯಿತು
ಕ್ಷಣದಾಸೆಗೆ ಜಗದ ಭಾರ
ಹೊತ್ತು ತಂದ
ಉತ್ತರಕುಮಾರರ
ಸಂಭೋಗ
ಇನ್ನೂ ಮುಗಿದಿಲ್ಲ
ಶವದೊಂದಿಗೆ

● ಎಂ.ಎಸ್. ಮೂರ್ತಿ

